ವಿಚಿತ್ರಪ್ರಾಣಿಯಂತೆ ನನ್ನನ್ನು ನೋಡಿ 'ಬರೇ ಅಮೆರಿಕದಲ್ಲಿ ಮಾತ್ರ ಇದೆ ಎಂದು ತಿಳಕೊಂಡಿದ್ದೀಯ' ಎಂದು ಉತ್ತರ ಕೊಡುತ್ತಾನೆ.

ಕನಸಿನ ಮುಂದುವರೆದ ಭಾಗದಲ್ಲಿ ನಾನು ಮತ್ತು ನಮ್ಮ ಪ್ರೊಫೆಸರರು ನಮ್ಮ ಮೆಚ್ಚಿನ ಕೃಷ್ಣ ಬೇಕರಿಯಲ್ಲಿ ಕೂತು 'ಹನಿ ಕೇಕ್' ಮತ್ತು ಸಕ್ಕರೆಯಿಲ್ಲದ ಕಾಫಿಯನ್ನು ಕುಡಿಯುತ್ತಾ 'ನಮ್ಮ ಕಾಲದಲ್ಲಿ ಹೀಗಿರಲಿಲ್ಲ' ಎಂದು ಹಪಹಪಿಸುತ್ತೇವೆ.

ಮತ್ತೊಮ್ಮೆ ನಾನು ಬೆವರುತ್ತಾ ಎದ್ದೇಳುತ್ತೇನೆ.

ಈ ಬಾರಿ ಸ್ನೇಹಿತರನ್ನು ಕೇಳದೇ ನೇರವಾಗಿ ಸೈಕಿಯಾಟ್ರಿಯಸ್ಟ್ ಹತ್ತಿರ ಅಧಿಕೃತವಾದ ಅಪಾಯಿಂಟ್‌ಮೆಂಟ್ ತೆಗೆದುಕೊಂಡೇ ಹೋದೆ. ನಾಲ್ಕೈದು ಸೆಷನ್‌ಗಳ ನಂತರ ನಾನು ಮಾಡುವ ವೃತ್ತಿಯಲ್ಲಿ ಪೂರಾ ತೃಪ್ತನಲ್ಲವೆಂದೂ, ಹಾಗಾಗಿ ಮತ್ತೆ ಮತ್ತೆ ವಾಪಸ್ಸು ಹೆಚ್ಚಿನ ತರಬೇತಿ ಬೇಕೆಂದು ನನ್ನ ಮನಸ್ಸು ಹಾತೊರೆಯುತ್ತಿದೆಯೆಂದೂ, ಅಮೆರಿಕದಲ್ಲಿ ಆಗಿರುವ ನನ್ನ ತರಬೇತಿಯ ಮೇಲೆ ನನಗೇ ನಂಬಿಕೆಯಿಲ್ಲದಿರುವುದರಿಂದ ನಾನು ಮತ್ತೆ ಮತ್ತೆ ಬಳ್ಳಾರಿ ಮೆಡಿಕಲ್ ಕಾಲೇಜಿಗೇ ಹೋಗುತ್ತಿದ್ದೀನೆಂದೂ ಹೇಳಿದರು. ನನ್ನ ತರಬೇತಿಯ ಶೈಶವಾವಸ್ಥೆ ಬಳ್ಳಾರಿಯಲ್ಲಾಗಿದ್ದರಿಂದ ಮಗುವಾಗಿದ್ದಾಗ ತೀರಲಾರದ ಬಯಕೆಗಳು ಹೀಗೆ ಕನಸಿನಲ್ಲಿ ಬಂದು ನನ್ನನ್ನು ಕಾಡುತ್ತಿವೆಯೆಂದು ಹೇಳುತ್ತಾರೆ. ಮಕ್ಕಳು ಓರಲ್ ಫಿಕ್ಸೇಶನ್‌ನಿಂದ ಮುಂದೆ ಉಗುರುಕಡಿಯುವಂತೆ, ಕುಡುಕರಾಗುವಂತೆ, ಸಿಗರೇಟು ಸೇದುವಂತೆ ಕೆಲಸದಲ್ಲಿನ ಅತೃಪ್ತಿ ಕೂಡ ಇಂತಹ ಒಂದು ಕಂಡಿಷನ್ ಎಂದು ಹೇಳಿದರು. 'ಯು ವೆರ್ ವೀನ್ಡ್ ಟೂ ಅರ್ಲೀ ಆಫ್ ಒನ್ ಆಫ್ ಯುವರ್ ಮೋಸ್ಟ್ ಬಿಲವೆಡ್ ಥಿಂಗ್ಸ್' – 'ನೀನು ಬಹಳವಾಗಿ ಇಷ್ಟಪಡುವ ಪದಾರ್ಥವೊಂದನ್ನು ಕೊಂಚ ಬೇಗ ನಿನ್ನಿಂದ ಕಸಿದುಕೊಳ್ಳಲಾಗಿದೆ. ಇದು ಬಹಳ ಸಾಮಾನ್ಯ' ಎಂದರು.

ಈ ಮನೋವೈದ್ಯರು ಮಾತುಮಾತಿಗೆ ನನ್ನ ಎಲ್ಲ ಕನಸುಗಳಿಗೂ ನನ್ನ ಬಾಲ್ಯವೇ ಕಾರಣ ಎಂದು ಹೇಳಿದರೆ ಏನು ಮಾಡುವುದು? ಎರಡನೇ ಕನಸಂತೂ ತಲೆಬುಡವಿಲ್ಲದ್ದು ಎಂದು ನನಗನಿಸಿದೆ. ನಾನು ಅತಿಯಾಗಿ ಪ್ರೀತಿಸುವ ನನ್ನ ಕೆಲಸದಲ್ಲಿ ನನಗೆ ತೃಪ್ತಿಯಿಲ್ಲ ಎಂದು ನಾನು ಕನಸಿನಲ್ಲಿಯೂ ಎಣಿಸಿಲ್ಲ (ಈಗ ಹಾಗೆ ಹೇಳುವುದಕ್ಕೆ ಭಯವಾಗುತ್ತಿದೆ). ಆದರೆ, ನನಗೆ ಹಾಗೆ ಕನಸು ಬೀಳುವುದು ಏಕೆ? ನನಗೆ ಈ ಕೆಲಸದಲ್ಲಿ ತೃಪ್ತಿಯಿಲ್ಲದಿದ್ದರೂ ನಾನು ಮತ್ತೆ ತರಬೇತಿಗಾಗಿ ಬಳ್ಳಾರಿಗೆ ಹೋಗುವುದೇಕೆ? ಅದೂ ನಾನು ಸುಮಾರು ವರ್ಷಗಳ ಹಿಂದೆ ಕಲಿತದ್ದನ್ನು ಮತ್ತೆ ಕಲಿಯುವುದಕ್ಕಾಗಿ.

ಮತ್ತೆ ನನ್ನ ಮನೋವೈದ್ಯನನ್ನೇ ಕೇಳುತ್ತೇನೆ. ಆತ ಏನೂ ಯೋಚಿಸದೇ 'ಅದೇ ನನ್ನ ಪಾಯಿಂಟು' ಎನ್ನುತ್ತಾನೆ. 'ನೀನು ಬಳ್ಳಾರಿಯಲ್ಲಿ ಕಲಿತ ವೈದ್ಯಕೀಯ ತರಬೇತಿಯ ಬಗ್ಗೆ ನಿನಗೆ ಬಹಳ ನಂಬಿಕೆಯಿದೆ, ಹೆಮ್ಮೆಯಿದೆ. ಹಾಗಾಗಿ, ನಿನ್ನ ಯಾವುದೇ ವೃತ್ತಿಯ ಅತೃಪ್ತಿ ನೇರವಾಗಿ ನಿನ್ನ ಕಲಿಕೆಯ ಶೈಶವಕ್ಕೇ ಪ್ರೊಜೆಕ್ಟ್ ಆಗುತ್ತದೆ. ನೀನು ಬಳ್ಳಾರಿಯಲ್ಲಿ ಇನ್ನೊಂದಿಷ್ಟು ವರ್ಷ ಇರಬೇಕಿತ್ತು' ಎನ್ನುತ್ತಾನೆ.

ಎಂಬಿಬಿಎಸ್, ಎಂಡಿ ಎರಡನ್ನೂ ಮಾಡಿ ಬಳ್ಳಾರಿಯಲ್ಲಿ ಮುಂದೇನನ್ನೂ ಮಾಡಲಾಗದೇ ಇದ್ದುದಕ್ಕೇ ನಾನು ಅಮೆರಿಕಕ್ಕೆ ಬಂದದ್ದು ಎಂದು ನಾನು ಹೇಳುತ್ತೇನೆ.

'ಅದೇ ನಿನ್ನ ಸಮಸ್ಯೆ' ಎಂದು ಆತ ಹೇಳುತ್ತಾನೆ.

ಮತ್ತೆ ಮತ್ತೆ ಬೀಳುವ ಎರಡೂ ಕನಸುಗಳೂ ನನ್ನ ವರ್ತಮಾನದ ಸಂಕಟಗಳಿಗೆ ನನ್ನ ಭೂತದ ಅತೃಪ್ತಿಯೇ ಕಾರಣ ಎಂದು ಮನೋವೈದ್ಯರ ಥಿಸ್ಸೆಯನ್ನು ಬೀಳಿಸಿಕೊಂಡು ಹೇಳುತ್ತಿದ್ದರೂ ನಾನೆಂದೂ ನನ್ನ ಶೈಶವಕ್ಕೆ ವಾಪಸ್ಸು ಹೋಗಲಾರೆ ಎಂದು ನನಗೆ ಗೊತ್ತಿದೆ.

ಒಂದು ಕನಸಿನಲ್ಲಿ ಹಕ್ಕಿಯಂತೆ ಹಾರದಿದ್ದರೂ ಕುಪ್ಪಳಿಸುತ್ತೇನೆ, ಇನ್ನೊಂದು ಕನಸಿನಲ್ಲಿ ಮತ್ತೆ ವಿದ್ಯಾರ್ಥಿಯಾಗುತ್ತೇನೆ. 'ಇಂಥ ಕನಸುಗಳು ಬೀಳಲಿ ಎಂದು ಹಾತೊರೆಯುವ ಮಂದಿ ಎಷ್ಟೋ ಜನ ಇದ್ದಾಗ್ಯೂ ನಿನಗೆ ಅನಾಯಾಸವಾಗಿ ಇಂಥ ಕನಸುಗಳು ಬೀಳುತ್ತಿವೆ, ಯಾಕೆ ಹೆದರುತ್ತೀಯ' ಎಂದು ಸೈಕಿಯಾಟ್ರಿಸ್ಟ್ ಸಮಾಧಾನ ಮಾಡುತ್ತಾನೆ.

ನನ್ನ ಈ ಎರಡೂ ಕನಸುಗಳು ನನಸಾಗದಿರಲಿ ಎಂದು ಪ್ರಾರ್ಥಿಸಿ ಆತ ಕೊಟ್ಟ ನಿದ್ರೆಮಾತ್ರೆಯನ್ನು ತೆಗೆದುಕೊಂಡು ಮಲಗುತ್ತೇನೆ.

ಮತ್ತೆ ಕನಸು ಬೀಳುತ್ತದೆ... ●